# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ

## Spl. CASE: 19/2022

**ಪ್ರಾ.ಸಾ. 5**
**ದೋ.ಸಾ. 1**

| | | |
|---|---|---|
| ಸಾಕ್ಷಿಯ ಹೆಸರು | : | ಕೆ. ನಾರಾಯಣಸ್ವಾಮಿ |
| ತಂದೆಯ ಹೆಸರು | : | ಲೇಟ್. ಕೊಂಡಪ್ಪ |
| ವಯಸ್ಸು | : | 65 ವರ್ಷ |
| ಉದ್ಯೋಗ | : | ನಿವೃತ್ತ. ಪಿ ಎಸ್ ಐ. |
| ವಾಸ | : | ಚಿಂತಾಮಣಿ |

**ದಿನಾಂಕ 12.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

1). ನಾನು ದಿನಾಂಕ 2019 ನೇ ಸಾಲಿನಿಂದ 2021 ನ ತನಕ ಚಿಂತಾಮಣಿ ಗ್ರಾಮಾಂತರ ಪೋಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 28-06-2021 ರಂದು ನಾನು ಠಾಣಾ ಕರ್ತವ್ಯದಲ್ಲಿದ್ದಾಗ ಬೆಃ 10-00 ಗಂಟೆ ಸಮಯದಲ್ಲಿ ಬಾತ್ಮೀದಾರರಿಂದ ಬಂದ ಖಚಿತ ಮಾಹಿತಿ ಏನೆಂದರೆ ಚಿಂತಾಮಣಿ ತಾಲ್ಲೂಕು, ಕಸಬಾ ಹೋಬಳಿ, ಎ. ಹೊಸಹಳ್ಳಿ ಗ್ರಾಮದ ನಿವಾಸಿಯಾದ ವೆಂಕಟರಾಮರೆಡ್ಡಿ ಬಿನ್ ಪೆದ್ದನ್ನ ನವರು ತನ್ನ ಮಾವ ಆವುಲರೆಡ್ಡಿ ರವರ ಜಮೀನಿನ ಹಾಗಲಕಾಯಿ ಬೆಳೆಯ ಮಧ್ಯೆದಲ್ಲಿ ಅಕ್ರಮವಾಗಿ ಮಾದಕ ವಸ್ತುವಾದ ಗಾಂಜಾ ಗಿಡಗಳನ್ನು ಬೆಳೆಸಿ ತಮ್ಮ ಶೆಡ್ ನಲ್ಲಿ ಇಟ್ಟಿರುವುದಾಗಿ ಬಂದ ಖಚಿತ ಮಾಹಿತಿಯನ್ನು ಆದರಿಸಿ ಸದರಿ ಮಾಹಿತಿಯನ್ನು ಮೌಖಿಕವಾಗಿ ಮಾನ್ಯ **ಡಿ ವೈ ಎಸ್ ಪಿ** ರವರಿಗೆ ತಿಳಿಸಿ ಅವರ ಮಾರ್ಗ ದರ್ಶದಲ್ಲಿ ನಮ್ಮ ಠಾಣಾ ಸಿಬ್ಬಂದಿಯವರಾದ ಪ್ರಾಸ-3 ಚಂದ್ರ

ಶೇಖರ್, ಚಾಸಾ–8 ಲೋಕೇಶ್, ಚಾಸಾ–9 ಸತೀಶ್ ಮತ್ತು ಚಾಸಾ–10 ರೋಷನ್ ಜಮೀರ್ ರವರೊಂದಿಗೆ ನಮ್ಮ ಇಲಾಖಾ ವಾಹನದಲ್ಲಿ ಎ. ಹೊಸಹಳ್ಳಿ ಗ್ರಾಮಕ್ಕೆ ಹೋಗಿ ಜಮೀನಿನ ಸ್ವಲ್ಪ ದೂರದಲ್ಲಿ ನಮ್ಮ ಜೀಪನ್ನು ನಿಲ್ಲಿಸಿ ಜಮೀನಿನ ಬಳಿ ನಡೆದುಕೊಂಡು ಹೋಗಿ, ಅಲ್ಲಿ ನಿರ್ಮಿಸಿದ್ದ ಶೆಡ್ ನ ಬಾಗಿಲನ್ನು ತೆಗೆದು ನೋಡಲಾಗಿ, ಹೊಸದಾಗಿ ಕಿತ್ತು ಇಟ್ಟಿರುವ 4 ಗಾಂಜಾ ಗಿಡಗಳು ಇರುವುದು ಕಂಡು ಬಂದಿರುತ್ತದೆ. ಈ ಬಗ್ಗೆ ಸ್ಥಳದಲ್ಲಿ ವರದಿಯನ್ನು ತಯಾರು ಮಾಡಿ ಚಾಸಾ–10 ರವರ ಮೂಲಕ ಠಾಣೆಯಲ್ಲಿ ದೂರನ್ನು ಸಲ್ಲಿಸುವಂತೆ ಕಳುಹಿಸಿಕೊಟ್ಟಿರುತ್ತೇನೆ. ಸಾಕ್ಷಿಯು ಸದರಿ ವರದಿ ಹಾಗೂ ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ, ಅದನ್ನು ಈಗ **ನಿಪಿ–7** ಎಂದು, ಸಾಕ್ಷಿಯ ಸಹಿಯನ್ನು **ನಿಪಿ–7(ಎ)** ಎಂದು ಗುರುತಿಸಲಾಯಿತು.

3. ನಂತರ ಕಲಂ 41 ರ ಎನ್.ಡಿ.ಪಿ.ಎಸ್ ಕಾಯಿದೆಯ ಅಡಿಯಲ್ಲಿ ರೆಕಾರ್ಡ್ ಆಫ್ ರೀಸನ್ ಅನ್ನು ತಯಾರು ಮಾಡಿ ತನಿಖೆಯನ್ನು ಮುಂದುವರಿಸಿರುತ್ತೇನೆ. ಸದರಿ ದಾಖಲೆಯನ್ನು ಈಗಾಗಲೇ ನಿಪಿ–1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ಈಗ ನಿಪಿ–1 (ಬಿ) ಎಂದು ಗುರುತಿಸಲಾಯಿತು. ನಂತರ ಸದರಿ ತನಿಖೆಗೆ ಸಹಕರಿಸಲು ಪಂಚರಾಗಿ ಇಬ್ಬರು ನೌಕರರನ್ನು ಕಳುಹಿಸಿಕೊಡುವಂತೆ ಮಾನ್ಯ ತಹಸಿಲ್ದಾರ್, ಚಿಂತಾಮಣಿ ರವರಿಗೆ ಮನವಿ ಸಲ್ಲಿಸಿಕೊಂಡಿರುತ್ತೇನೆ. ಸಾಕ್ಷಿಯು ಸದರಿ ಮನವಿ ಹಾಗೂ ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ, ಅದನ್ನು ಈಗ **ನಿಪಿ–8** ಎಂದು, ಸಾಕ್ಷಿಯ ಸಹಿಯನ್ನು **ನಿಪಿ–8 (ಎ)** ಎಂದು ಗುರುತಿಸಲಾಯಿತು. ಅದರಂತೆ ಮಾನ್ಯ ತಹಸೀಲ್ದಾರ್ ರವರು ರೆವೆನ್ಯೂ ಅಧಿಕಾರಗಳಾದ ಫ್ರಾಸಾ–1 ಗೋಕುಲ್, ಚಾಸಾ–3 ಮಧುಕರ್ ಮತ್ತು ಚಾಸಾ–4 ನಾಗವೇಣಿ ರವರನ್ನು ಕಳುಹಿಸಿಕೊಟ್ಟಿರುತ್ತಾರೆ. ಸದರಿ ರವರನ್ನು ಸ್ಥಳಕ್ಕೆ ನಮ್ಮ ಇಲಾಖಾ ವಾಹನವನ್ನು ಕಳುಹಿಸಿ ಕರೆಸಿಕೊಂಡಿರುತ್ತೇನೆ.

4. ಆರೋಪಿ ಬಗ್ಗೆ ಗ್ರಾಮದಲ್ಲಿ ವಿಚಾರ ಮಾಡಲಾಗಿ ಆತನು ತಲೆ ಮರೆಸಿಕೊಂಡಿರುವುದಾಗಿ ತಿಳಿದು ಬಂದಿರುತ್ತದೆ. ನಂತರ ಪಂಚರ ಸಮಕ್ಷಮ ಸ್ಥಳದಲ್ಲಿ

ಮಹಜರ್ ಕ್ರಮವನ್ನು ಮಃ12-00 ರಿಂದ 01-30 ಗಂಟೆ ತನಕ ಜರುಗಿಸಲಾಗಿರುತ್ತದೆ. ಆ ಕಾಲಕ್ಕೆ ಸದರಿ 4 ಗಿಡಗಳನ್ನು ತೂಕ ಮಾಡಿ ನೋಡಲಾಗಿ ಅವುಗಳ ತೂಕ 01 ಕೆಜೆ 520 ಗ್ರಾಂ ಇದ್ದು , ಅವುಗಳ ಬೆಲೆ ಸುಮಾರು 30 ಸಾವಿರ ವಾಗಿರುತ್ತದೆ. ಸದರಿ ಗಾಂಜಾ ಗಿಡಗಳನ್ನು ಮುಂದಿನ ಕ್ರಮಕ್ಕಾಗಿ ಬಿಳಿ ಬಟ್ಟೆಯಿಂದ ಹೊಲೆದು ಅಮಾನತ್ತು ಪಡಿಸಿಕೊಂಡಿದ್ದು, ಅದಕ್ಕೂ ಮುನ್ನ ಆ ಪೈಕಿ ಸುಮಾರು 50 ಗ್ರಾಂ ನಷ್ಟು ಮಾದರಿ ಗಾಂಜಾ ಗಿಡವನ್ನು ಎಫ್ ಎಸ್ ಎಲ್ ಗಾಗಿ ಬೇರ್ಪಡಿಸಿ ಪ್ರತ್ಯೇಕವಾಗಿ ಪ್ಯಾಕ್ ಮಾಡಿ ಸೀಲ್ ಮಾಡಿ ಜಪ್ತು ಮಾಡಿರುತ್ತೇನೆ. ಜಪ್ತು ಕಾಲಕ್ಕೆ ಠಾಣೆಗೆ ನೀಡಲಾಗಿದ್ದ ಕ್ಯಾಮಾರದ ಮೂಲಕ ಫೋಟೋಗಳನ್ನು ತೆಗೆಸಿರುತ್ತೇನೆ. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ಈಗ **ನಿಪಿ-2 (ಸಿ)** ಎಂದು ಗುರುತಿಸಲಾಯಿತು. ಸಾಕ್ಷಿ ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳಲ್ಲಿ 06 ಭಾವಚಿತ್ರಗಳನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದ್ದು, ಗುರುತಿಸದ ಮತ್ತೊಂದು ಭಾವ ಚಿತ್ರವನ್ನು ಈಗ **ನಿಪಿ-3(ಎ)** ಎಂದು ಗುರುತಿಸಲಾಯಿತು.

5. ನಂತರ ಅಮಾನತ್ತು ಪಡಿಸಿಕೊಂಡ ಮಾಲಿನೊಂದಿಗೆ ಠಾಣೆಗೆ ವಾಪಸ್ಸಾಗಿ ಚಾಸಾ-13 ರವರ ಮುಂದೆ ಹಾಜರುಪಡಿಸಿರುತ್ತೇನೆ. ನಂತರ ದಿನಾಂಕ 23.07.2021 ರಂದು ಚಾಸಾ-13 ರವರು ವರ್ಗಾವಣೆಗೊಂಡ ಕಾರಣ ಮುಂದಿನ ತನಿಖೆಯನ್ನು ನನಗೆ ವಹಿಸಿಕೊಟ್ಟಿರುತ್ತಾರೆ. ಎಪ್ ಎಸ್ ಎಲ್ ಗೆ ತೆಗೆದ ಮಾಲನ್ನು ಬಿಟ್ಟು ಉಳಿದ ಮಾಲನ್ನು ಮಹಿಳಾ ಪಿಸಿ - ಬಿಂದೂ ರವರ ಮೂಲಕ ಡಿ ಆರ್ ಗೆ ಕಳುಹಿಸಿದ್ದ ಬಗ್ಗೆ ಸ್ವೀಕೃತಿಯನ್ನು ಪಡೆದಿರುತ್ತೇನೆ. ಸಾಕ್ಷಿಯು ಸದರಿ ದಾಖಲೆ ಹಾಗೂ ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ, ಅದನ್ನು ಈಗ **ನಿಪಿ-9** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-9 (ಎ)** ಎಂದು ಗುರುತಿಸಲಾಯಿತು. ನಾನು ದಿನಾಂಕ 21-08-2021 ರಂದು ಆರೋಪಿಯು ಮಾನ್ಯ ಉಚ್ಚ ನ್ಯಾಯಾಲಯದಿಂದ ಜಾಮೀನು

ಪಡೆದು ಠಾಣೆಗೆ ಹಾಜರಾದ ಮೇರೆಗೆ ಆತನ ವಿರುದ್ಧ ಸೂಕ್ತ ದಸ್ತಗಿರಿ ಕ್ರಮ ಅನುಸರಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಆರೋಪಿಯ ಸ್ವ–ಇಚ್ಛಾ ಹೇಳಿಕೆ ಪಡೆದುಕೊಂಡಿರುತ್ತೇನೆ.

6. ನಂತರ ಆರೋಪಿ ಹಾಗೂ ಪಂಚರೊಂದಿಗೆ ಸ್ಥಳಕ್ಕೆ ಹೋಗಿ ಅವರ ಸಮಕ್ಷಮ ಘಟನಾ ಸ್ಥಳದಲ್ಲಿ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ–5 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ಈಗ **ನಿಪಿ–5 (ಬಿ)** ಎಂದು, ಆರೋಪಿ ಸಹಿಯನ್ನು **ನಿಪಿ–5 (ಸಿ)** ಎಂದು ಗುರುತಿಸಲಾಯಿತು. ದಿನಾಂಕ 28–09–2021 ರಂದು ಜಮೀನಿನ ಮಾಲೀಕರಾದ ಚಾಸಾ–11 ಆವುಲರೆಡ್ಡಿ ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ನಾನು ನಿವೃತ್ತಿ ಹೊಂದಿದ ಕಾರಣ ಕಡತವನ್ನು ಮುಂದಿನ ತನಿಖೆಗಾಗಿ ಪಿ ಎಸ್ಐ – ನಾರಾಯಣಸ್ವಾಮಿ ರವರಿಗೆ ವಹಿಸಿಕೊಟ್ಟಿರುತ್ತೇನೆ. ಸಾಕ್ಷಿಯು ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು ಆರೋಪಿತರ ಪರ ಶ್ರೀ ಆರ್ ಕೆ ರವರಿಂದಃ**

7. ನಾನು ಬೆಃ 10–00 ಗಂಟೆಯಲ್ಲಿ ಠಾಣಾ ಕರ್ತವ್ಯದಲ್ಲಿದ್ದಾಗ ಮಾಹಿತಿಯನ್ನು ದೂರವಾಣಿ ಮೂಲಕ ಸ್ವೀಕರಿಸಿಕೊಂಡಿರುತ್ತೇನೆ. ನಾನು ಸ್ವೀಕರಿಸಿದ ಮಾಹಿತಿಯನ್ನು ಲಿಖಿತ ರೂಪದಲ್ಲಿ ಬರೆದುಕೊಂಡಿರುವುದಿಲ್ಲ. ಆ ರೀತಿ ಲಿಖಿತ ರೂಪದಲ್ಲಿ ಬರೆದುಕೊಂಡು ನಮ್ಮ ಮೇಲಾಧಿಕಾರಿಗಳ ಗಮನಕ್ಕೆ ತಂದಿರುವುದಿಲ್ಲ ಎಂದರೆ ಸರಿ. ಆ ರೀತಿ ಕಾನೂನು ಪರಿಪಾಲನೆ ಮಾಡಿ ನಮ್ಮ ಮೇಲಾಧಿಕಾರಿಗಳಿಂದ ಅನುಮತಿ ಪಡೆದು ತನಿಖೆಯನ್ನು ಮುಂದುವರೆಸಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ.

8. ನಾನು ಹಾಗೂ ಮೂರು ಸಿಬ್ಬಂದಿಗಳು ಘಟನಾ ಸ್ಥಳಕ್ಕೆ ಬೆಃ 10–30 ಗಂಟೆ ಸಮಯಕ್ಕೆ ಹೋಗಿರುತ್ತೇವೆ. ಆ ಕಾಲಕ್ಕೆ ಸ್ಥಳದಲ್ಲಿ ಯಾರು ಇರಲಿಲ್ಲ. ಘಟನಾ ಸ್ಥ,ಳವನ್ನು

ನಿಮಗೆ ಯಾರು ತೋರಿಸಿದರು ಎಂದು ಕೇಳಲಾಗಿ ಸಾಕ್ಷಿಯು ದಾರಿ ಹೋಕರು ತೋರಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿರವರನ್ನು ಈ ಪ್ರಕರಣದಲ್ಲಿ ಸಾಕ್ಷಿದಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಅವರುಗಳನ್ನು ಈ ಪ್ರಕರಣದಲ್ಲಿ ಸಾಕ್ಷಿದಾರರನ್ನಾಗಿ ಮಾಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಸದರಿ ಸಮಯದಲ್ಲಿ ರೆವೆನ್ಯೂ ಅಧಿಕಾರಿಗಳನ್ನು ಕರೆಯಿಸಿ ಸ್ಥಳದ ದಾಖಲಾತಿಗಳನ್ನು ಪರಿಶೀಲನೆ ಮಾಡಿರುವುದಿಲ್ಲ ಎಂದರೆ ಸರಿ.

9. ನಿಪಿ– 3 ರ ಪೋಟೋದಲ್ಲಿ ನಾನು ಕಂಡು ಬರುವುದಿಲ್ಲ ಎಂದರೆ ಸರಿಯಲ್ಲ. ನಿಪಿ–3 ರ ಪೋಟೋಗಳಲ್ಲಿ ಹಾಕಲ ಕಾಯಿಗಿಡಗಳು ಕಂಡುಬರುವುದಿಲ್ಲ ಎಂದರೆ ಸಾಕ್ಷಿಯು ಸದರಿ ಗಿಡಗಳಿಗೆ ಚಪ್ಪರ ಹಾಕಿರುವುದು ಕಂಡು ಬರುತ್ತದೆ ಆದರೇ ಗಿಡಗಳು ಒಣಗಿರುತ್ತವೆ ಎಂದು ನುಡಿದಿರುತ್ತಾರೆ.

10. ಈಗ ನನಗೆ ತೋರಿಸಿದ 2 ಪೋಟೋಗಳಲ್ಲಿ ನಾನು ಕಂಡು ಬರುತ್ತೇನೆ ಎಂದರೆ ಸರಿ. ಸಾಕ್ಷಿ ಸ್ವತಃ ನುಡಿಯುತ್ತಾರೆ, ಸದರಿ ಪೋಟೋಗಳು ಈ ಪ್ರಕರಣಕ್ಕೆ ಸಂಬಂದಿಸಿರುವುದಿಲ್ಲ. ಸದರಿ ಪೋಟೋಗಳನ್ನು ಈಗಾಗಲೇ ನಿಡಿ–1 ಮತ್ತು 2 ಎಂದು ಗುರುತಿಸಲಾಗಿದ್ದು, ಸಿಡಿ ಮತ್ತು 65 (ಬಿ) ಪ್ರಮಾಣ ಪತ್ರವನ್ನು ಹಾಜರಪಡಿಸಿರುವುದಿಲ್ಲ, ಆ ಕಾರಣ ಅವುಗಳನ್ನು ಹಾಜರುಪಡಿಸುವ ಮತ್ತು ಅವುಗಳನ್ನು ರುಜುವಾತು ಪಡಿಸುವ ಷರತ್ತಿಗೆ ಒಳಪಟ್ಟಿರುತ್ತದೆ. ನಿಪಿ–3 ರಲ್ಲಿರುವ ಸಿಬ್ಬಂದಿಗಳು ಮತ್ತು ಪಂಚರು ನಿಡಿ–1 ಮತ್ತು 2 ರಲ್ಲಿ ಕಂಡು ಬರುತ್ತಾರೆ ಎಂದರೆ ಸರಿ. ನಿಡಿ–1 ಮತ್ತು 2 ರ ಪೊಟೋಗಳನ್ನು ಯಾವ ಪ್ರಕರಣದಲ್ಲಿ ತೆಗೆಯಲಾಗಿದೆ ಎಂದರೆ ಸಾಕ್ಷಿಯು, ಕಡತವನ್ನು ಪರಿಶೀಲಿಸದೆ ಹೇಳಲು ಬರುವುದಿಲ್ಲ ಎಂದು ನುಡಿದಿರುತ್ತಾರೆ. ನಿಪಿ–3 ರ ಪೋಟೋದಲ್ಲಿ ಘಟನಾ ಸ್ಥಳದ ಸರ್ವೇ ನಂಬರ್ ಕಂಡು ಬರುವುದಿಲ್ಲ ಎಂದರೆ ಸರಿ. ನಿಪಿ–3 ರಲ್ಲಿ ಕಂಡು ಬರುವ ಜಾಗಕ್ಕೂ ಆರೋಪಿಗೂ ಯಾವುದೇ ಸಂಬಂದವಿಲ್ಲ ಎಂದರೆ ಸರಿಯಲ್ಲ. ನಿಪಿ–3 ರ ಪೋಟೋಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

11. ಚಾಸಾ–13 ರವರು ವರ್ಗಾವಣೆಯಾದ ಕಾರಣ ಮುಂದಿನ ತನಿಖೆಯನ್ನು ನನಗೆ ವಹಿಸಿರುತ್ತಾರೆ ಎನ್ನುವ ಬಗ್ಗೆ ಯಾವುದೇ ದಾಖಲೆಯನ್ನು ನ್ಯಾಯಾಲಯದ ಮುಂದೆ ಹಾಜರಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಈ ಬಗ್ಗೆ ಸಿಡಿ ಯಲ್ಲಿ ನಮೂದಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಪ್ರಕರಣದಲ್ಲಿ ನಾನು ಪಿರ್ಯಾದಿಯಾದ ಕಾರಣ ತನಿಖೆ ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ. ಸಿಡಿಯನ್ನು ಒರತು ಪಡಿಸಿ ಮೇಲಾಧಿಕಾರಿಗಳಿಂದ ತನಿಖೆ ನಡೆಸಲು ನನಗೆ ಯಾವುದೇ ಅನುಮತಿ ನಿಡಿಲ್ಲ ಎಂದರೆ ಸರಿ.

12. ಈ ಪ್ರಕರಣದಲ್ಲಿ ನಾನು ಅಂತಿಮ ವರದಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ. ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಅಂತಿಮ ವರದಿಯ ಕೊನೆಯ ಪುಟದಲ್ಲಿ ಕಾಣುತ್ತಿರುವ ತನಿಖಾಧಿಕಾರಿಗಳ ಸಹಿ ನನ್ನದೇ ಎಂದರೆ ಸರಿ. ಸಾಕ್ಷಿಯು ಸದರಿ ಸಹಿಯನ್ನು ಒಪ್ಪಿ ದ ಮೇರೆಗೆ ಅಂತಿಮ ವರದಿಯನ್ನು ನಿಡಿ–3 ಎಂದು, ಸಾಕ್ಷಿಯ ಸಹಿಯನ್ನು ನಿಪಿ–3 (ಎ) ಎಂದು ಗುರುತಿಸಲಾಯಿತು. ನಿಮ್ಮ ಪ್ರಕಾರ ಅಂತಿಮ ವರದಿಯನ್ನು ಯಾರು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ನಿಡಿ–3 (ಎ) ರ ಅನುಸಾರ ನಾನೇ ದಾಖಲು ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ . ನಿಡಿ –3 ರ ಅನುಸಾರ ನನ್ನ ಮುಖ್ಯ ವಿಚಾರಣೆಯಲ್ಲಿ ನನಗೆ ನಿವೃತಿಯಾದ ಕಾರಣ ಮುಂದಿನ ತನಿಖೆಯನ್ನು ಪಿ ಎಸ್ ಐ – ನಾರಾಯಣಸ್ವಾಮಿ ರವರಿಗೆ ವಹಿಸಿಕೊಟ್ಟಿರುತ್ತೇನೆ ಎನ್ನುವುದು ಸರಿಯಲ್ಲ ಎಂದರೆ ಸರಿ. ನಾನು ಈ ಪ್ರಕರಣದಲ್ಲಿ ಯಾವುದೇ ತನಿಖೆಯನ್ನು ಕೈ ಗೊಳ್ಳದೇ ಇದ್ದರುೂ ಸಹ ಆರೋಪಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋಗಿರುವುದಿಲ್ಲ,ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ, ಪೋಟೋಗಳನ್ನು ತೆಗೆದಿರುವುದಿಲ್ಲ, ಈ ಪ್ರಕರಣಕ್ಕಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ

ಯಾವುದೇ ಸಂಬಂಧವಿಲ್ಲದೇ ಇದ್ದರೂ, ನಾನು ಯಾವುದೇ ತನಿಖೆ ಮಾಡದೇ ಇದ್ದರೂ ಸಹ ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-
**(ಟಿ. ಪಿ. ರಾಮಲಿಂಗೆ ಗೌಡ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.